ಶ್ರೀ ವಾಟಾಳ್ ನಾಗರಾಜ್.—ನನಗೆ ನೀವು ಉಪ ಪ್ರಶ್ನೆಗೆ ಅವಕಾಶವನ್ನು ಕೊಡುತ್ತಿಲ್ಲ. ನಿಮ್ಮ ವರ್ತನೆಯಿಂದ ನನಗೆ ಬಹಳ ಬೇಸರವಾಗಿದೆ. ಆದ್ದರಿಂದ ನಾನು ಈ ಸಭೆಯಲ್ಲಿರುವುದಿಲ್ಲ. ನಿರ್ಗಮಿಸುತ್ತದೆ.

(ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು).—

ಕರ್ನಾಟಕ–ಮಹಾರಾಷ್ಟ್ರ ಗಡಿ ವಿವಾದ

೨೨. (ಬಿ) ಶ್ರೀ ಎಂ. ವಿ. ವೆಂಕಟಪ್ಪ. (ಮುಳಬಾಗಿಲು).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮಾನ್ಯ ಮುಖ್ಯಮಂತ್ರಿಗಳೊಡನೆ ಇತ್ತೀಚೆಗೆ ಮಹಾರಾಷ್ಟ್ರದ ಮುಖ್ಯಮಂತ್ರಿಯವರು ಕರ್ನಾಟಕ ಮಹಾರಾಷ್ಟ್ರ ಗಡಿ ವಿವಾದದ ಬಗ್ಗೆ ಸಮಾಲೋಚನೆ ಮಾಡಿರುವುದು ನಿಜವೇ?

ಆ) ಸಮಾಲೋಚನೆ ಮಾಡಿದ್ದರೆ, ಅದರ ಪರಿಣಾಮಗಳೇನು?

ಇ) ಮೇಲ್ಕಂಡ ಗಡಿ ವಿವಾದದ ಬಗ್ಗೆ ಸರ್ಕಾರದ ಸ್ಪಷ್ಟ ನಿಲುವೇನು?

ಶ್ರೀ ವೀರೇಂದ್ರಪಾಟೀಲ್ (ಮುಖ್ಯ ಮಂತ್ರಿಗಳು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಮಹಾಜನ ಆಯೋಗ ತೀರ್ಪನ್ನು ಸಂಪೂರ್ಣವಾಗಿ ಜಾರಿಗೊಳಿಸುವುದೇ ಸರ್ಕಾರದ ಸ್ಪಷ್ಟ ನಿಲುವಾಗಿದೆ.

ಶ್ರೀ ಎಂ. ವಿ. ವೆಂಕಟಪ್ಪ.—ಸ್ವಾಮಿ, ಭಾರತದ ಪ್ರಧಾನ ಮಂತ್ರಿಗಳಾಗಲಿ. ಕೇಂದ್ರದ ಗೃಹ ಮಂತ್ರಿಗಳಾಗಲಿ ಅಥವಾ ಬೇರೆ ಯಾವ ಮಂತ್ರಿಗಳೇ ಆಗಲಿ ಅಥವಾ ಮಹಾರಾಷ್ಟ್ರದ ಮುಖ್ಯ ಮಂತ್ರಿಗಳೇ ಆಗಲಿ ಕರ್ನಾಟಕ–ಮಹಾರಾಷ್ಟ್ರದ ಗಡಿ ವಿವಾದವನ್ನು ಪ್ಲೆಬಿಸೈಟ್ ಮೂಲಕ ಬಗೆಹರಿಸಿ ಕೊಳ್ಳಬೇಕೆಂದು ಹೇಳಿದ್ದಾರೆಯೇ?

ಶ್ರೀ ವೀರೇಂದ್ರ ಪಾಟೀಲ್.—ನಾನು ಮುಖ್ಯಮಂತ್ರಿಯಾದ ಮೇಲೆ ಯಾರೂ ಕೂಡ ಇದರ ಬಗ್ಗೆ ಕೇಳಿಲ್ಲ.

ಶ್ರೀ ಎಂ.ವಿ. ವೆಂಕಟಪ್ಪ.—ಮಹಾರಾಷ್ಟ್ರದ ಮುಖ್ಯ ಮಂತ್ರಿಗಳು ಏನಾದರೂ ಹೇಳಿದ್ದಾರೆಯೆ?

ಶ್ರೀ ವೀರೇಂದ್ರ ಪಾಟೀಲ್.—ಅವರು ಪದೇ ಪದೇ ಸ್ಟೇಟ್‌ಮೆಂಟ್ ಕೊಡುತ್ತಲೇ ಇರುತ್ತಾರೆ. ಅದರಲ್ಲೂ ಚುನಾವಣೆ ಸಮೀಪ ಬಂದಾಗಲಂತೂ ಇಂಥ ಸ್ಟೇಟ್‌ಮೆಂಟ್‌ಗಳು ಬಹಳ ಜಾಸ್ತಿಯಾಗುತ್ತವೆ. ಇದು ತಮಗೂ ಗೊತ್ತಿದೆ. ಯಾವ ಉದ್ದೇಶಕ್ಕೋಸ್ಕರ ಈ ರೀತಿಯ ಸ್ಟೇಟ್‌ಮೆಂಟನ್ನು ಕೊಡುತ್ತಾರೆಂಬುದನ್ನು ತಾವೇ ಅರ್ಥಮಾಡಿಕೊಳ್ಳಬೇಕು. ಆದರೆ ನಮ್ಮ ಸರ್ಕಾರದ ನಿಲುವು ಏನೆಂದರೆ ಗಡಿ ಪ್ರಶ್ನೆ ಎನ್ನುವುದು ಯಾವುದೂ ಇಲ್ಲವೇ ಇಲ್ಲ ಗಡಿ ಪ್ರಶ್ನೆ ನಮ್ಮ ಮುಂದೆ ಯಾವುದೂ ಉಳಿದಿಲ್ಲ. ಏನಾದರೂ ಮಾಡಬೇಕಾದದ್ದು ಉಳಿದಿದ್ದರೆ ಮಹಾಜನ್ ಆಯೋಗದ ಐತೀರ್ಪನ್ನು ಸಂಪೂರ್ಣವಾಗಿ ಜಾರಿಗೆತರಬೇಕಾದುದು ಅಷ್ಟೇ ಈ ಬಗ್ಗೆ ನಾನು ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇವೆ. ಹಿಂದಿನ ಸರ್ಕಾರದ ನಿಲುವು ಈ ಬಗ್ಗೆ ಏನಿತ್ತೋ ಅದೇ ನಿಲುವನ್ನು ನಮ್ಮ ಇಂದಿನ ಸರ್ಕಾರವೂ ಕೂಡ ತಳೆದಿದೆ.

SRI BAPU SAHEB RAO SAHEB MAHAGAONKAR.—Mr. Speaker Sir Mahajan Commission award is not final. There is a necessity to meet both the Chief Ministers and discuss this matter. It has to be discussed on the Floor of Parliament and juctice should be given to the border area people. The people of Belgaum have elected us and not the people outside the State.

SRI VEERENDRA PATIL.—There is no question of discussing this matter because the Govt. of India took lot of interest and they made

consistent efforts continuously for ten years Having failed in their efforts to resolve the dispute ultimately the Government of India decided to refer this matter to a third party, a Commission headed by a retired Chief Justice of the Suprem Court i.e., Late Justice Mahajan Late Justice Mahajan after going into this matter and after visiting the spot and after making a thorough enquiry has submitted that report. that report is binding on all the State including Govt. of India. because it is appointed in consultation with all the concerned parties, i.e., concerned States The only thing that is left now is the question of implementing the recommendations of the Mahajan Commission,

ಶ್ರೀ ಡಿ. ಬಿ. ಚಂದ್ರೇಗೌಡ.—ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಒಂದು ವಿಷಯವನ್ನು ತರುತ್ತಿದ್ದೇನೆ. ಇತ್ತೀಚೆಗೆ ಮರಾಠಿಯ ಒಂದು ಪತ್ರಿಕೆಗೆ ತಮ್ಮ ಮಂತ್ರಿಮಂಡಲದ ಸದಸ್ಯರೊಬ್ಬರು ಬೆಳಗಾವಿಯಲ್ಲಿ ಸ್ಪೆಬಿಸೈಟ್ ಆಗಬೇಕೆಂದು ಹೇಳಿದ್ದಾರೆಂದು ವರದಿಯಾಗಿದೆ. ಇದು ತಮ್ಮ ಗಮನಕ್ಕೆ ಬಂದಿದೆಯೇ ? ಬೆಳಗಾವಿಯ ವಿಚಾರದಲ್ಲಿ ಸ್ಪೆಬಿಸೈಟ್ ಮೂಲಕ ತೀರ್ಮಾನವಾಗಬೇಕೆಂದು ತಮ್ಮ ಮಂತ್ರಿಮಂಡಲದ ಸದಸ್ಯರೊಬ್ಬರು ಹೇಳಿದ್ದಾರೆಂದು ಮರಾಠಿ ಪತ್ರಿಕೆಯಲ್ಲಿ ವರದಿಯಾಗಿತು. ಹಾಗೇ ನಾದರೂ ಇದ್ದರೆ, ಅಂತಹ ಮಂತ್ರಿಗಳ ಬಗ್ಗೆ ಏನು ಕ್ರಮ ತೆಗೆದುಕೊಳ್ಳುವುದಕ್ಕೆ ಯೋಚನೆ ಮಾಡಿದ್ದೀರಿ ? ಮಹಾರಾಷ್ಟ್ರದ ಮುಖ್ಯಮಂತ್ರಿಯಾಗಲಿ ಅಥವಾ ಮಹಾರಾಷ್ಟ್ರದ ಇನ್ನಾವುದೇ ನಾಯಕ ರಾಗಲಿ ಈ ಬಗ್ಗೆ ಸಮಾಲೋಚನೆ ಮಾಡಲಿಕ್ಕೆ ಕೇಂದ್ರಕ್ಕೆ ನಿಯೋಗ ಹೋಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷದ ನಾಯಕರ ಪ್ರಶ್ನೆಯ ಬೆಳಗಾವಿಯಲ್ಲಿ ನಾನು ಇದ್ದಾಗ ಪತ್ರಿಕಾಕರ್ತರು ಈ ಪ್ರಶ್ನೆಯನ್ನು ನನಗೆ ಕೇಳಿದರು, ನಿಮ್ಮ ಸಹೋದ್ಯೋಗಿಯೊಬ್ಬರು ಸಂದರ್ಶನ ಕೊಟ್ಟಾಗ ಪ್ಲೆಬಿಸೈಟ್ ಬಗ್ಗೆ ಅವರು ತಮ್ಮ ಒಪ್ಪಿಗೆಯನ್ನು ನೀಡಿದ್ದಾರೆ ಎಂದು ತಮ್ಮ ಗಮನಕ್ಕೆ ಬಂದಿದೆಯೇ ಎಂದು ಅವರು ಕೇಳಿದಾಗ ನಾನು ಆ ರೀತಿ ಅವರು ಸೀಡಿಲ್ಲವೆಂದು ಹೇಳಿದ್ದೇನೆ. ಮತ್ತು ಆ ರೀತಿ ಪತ್ರಿಕೆಯಲ್ಲಿ ಏನಾದರೂ ಬಂದಿದ್ದರೆ ಅದು ಸರಿಯಾಗಿ ಬಂದಿಲ್ಲ ಎಂದು ಹೇಳಿ ಅನಂತರ ನನ್ನ ಸಹೋದ್ಯೋಗಿಗಳ ಜೊತೆಯಲ್ಲಿ ಮಾತನಾಡಿದ ಮೇಲೆ ಅವರು ಸ್ಪಷ್ಟವಾಗಿ ಹೇಳಿದರು ಮತ್ತು ಆ ರೀತಿ ಸ್ಟೇಟ್‌ಮೆಂಟ್ ಕೊಟ್ಟಿಲ್ಲವೆಂದು ಹೇಳಿದರು. ನಾನು ಕೂಡ ಕರ್ನಾಟಕ ಏಕೀಕರಣಕ್ಕಾಗಿ ಹೋರಾಡಿದ್ದೇನೆ. ಬೆಳಗಾವಿ ಕರ್ನಾಟಕದ ಒಂದು ಅವಿಭಾಜ್ಯ ಅಂಗ. ಕರ್ನಾಟಕದಲ್ಲಿ ಬೆಳಗಾಂ ಯಾವತ್ತೂ ಇರುವಂಥಾದ್ದು ಬೆಳಗಾಂ ಬಗ್ಗೆ ಈ ತರಹ ಪ್ಲೆಬಿಸೈಟ್ ಒಪೀನಿಯನ್ ಪೂಲ್ ಬಗ್ಗೆ ನಾನು ಸಂಪೂರ್ಣ ವಿರೋಧವಾಗಿ ಮಾತನಾಡಿದ್ದೇನೆಂದು ಅವರು ಸಂಪೂರ್ಣವಾಗಿ ಹೇಳಿದ್ದಾರೆ. ಮಾನ್ಯ ಸದಸ್ಯರು ನಿಯೋಗ ಹೋಗಿದ್ದಾರೆಂದು ಇನ್ನೊಂದು ಪ್ರಶ್ನೆ ಯನ್ನು ಕೇಳಿದ್ದಾರೆ. ಚುನಾವಣೆ ಬಂದಾಗ ನಿಯೋಗಗಳು ಹೋಗುತ್ತವೆ. ಸ್ಟೇಟ್‌ಮೆಂಟ್‌ಗಳನ್ನು ಕೊಡುತ್ತಾರೆ. ಅನೇಕ ಪಬ್ಲಿಕ್ ಮೀಟಿಂಗ್‌ಗಳನ್ನು ಮಾಡುತ್ತಾರೆ. ಹೆಚ್ಚಾಗಿ ಗಡಿಯಿಂದಾಚೆಗಿರುವ ನಾಯಕರ ಪ್ರಚೋದನೆಯಿಂದ ಏನಾದರೂ ಆಗುತ್ತದೆಯೇ ಹೊರತಾಗಿ ನಿಜವಾಗಿಯೂ ಬೆಳಗಾಂ ಸುತ್ತ ಮುತ್ತಲಿನ ಜನತೆಗೆ ಈ ಪ್ರಶ್ನೆಯಲ್ಲಿ ಯಾವ ತರಹ ಆಸಕ್ತಿಯೂ ಇಲ್ಲ.

ಶ್ರೀ ಹೆಚ್. ಎಸ್. ಕೌಜಲಗಿ.—ಮಾನ್ಯ ಮುಖ್ಯ ಮಂತ್ರಿಗಳು ಮಹಾಜನ್ ಆಯೋಗದ ತೀರ್ಪನ್ನು ಸಂಪೂರ್ಣ ಜಾರಿಗೊಳಿಸುವುದಕ್ಕೆ ಈ ಸರ್ಕಾರದ ನಿಲುವು ಏನೆಂದು ಹೇಳಿದ್ದಾರೆ. ಅದಕ್ಕೆ ನಾನು ಅಭಿನಂದಿಸುತ್ತೇನೆ. ಮುಖ್ಯಮಂತ್ರಿಗಳು ಹಾಗೂ ಮಹಾರಾಷ್ಟ್ರದ ನಾಯಕರುಗಳು ಮೇಲಿಂದ ಮೇಲೆ ಜನಗಣತಿಯ ಪ್ರಕಾರ ಈ ವಿಚಾರವನ್ನು ಬಿಡಿಸಬೇಕೆಂದು ಹೇಳುತ್ತಿದ್ದಾರೆ. ಪ್ರಧಾನಮಂತ್ರಿ ಗಳು ಹಾಗೂ ಕೇಂದ್ರದ ಬೇರೆ ಬೇರೆ ನಾಯಕರನ್ನು ಹೋಗಿ ಒತ್ತಾಯಿಸುತ್ತಿದ್ದಾರೆ. ಹೀಗಾಗಿ ನಾವು ನಮ್ಮ ಸರ್ಕಾರದ ಪರವಾಗಿ ಅಲ್ಲಿ ಒಂದು ಶಾಶ್ವತ ನಿಯೋಗ ಹೋಗಿ ನಮ್ಮ ಸರ್ಕಾರದ ನಿಲುವನ್ನು ಮತ್ತೊಮ್ಮೆ ದೃಢೀಕರಿಸಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರ ಸಲಹೆಯನ್ನು ಒಪ್ಪಬೇಕಾದ ಅವಶ್ಯಕತೆ ಇಲ್ಲ. ಏಕೆಂದರೆ ಈಗಾಗಲೇ ಅನೇಕ ಸಲ ಮಹಾರಾಷ್ಟ್ರ ನಾಯಕರುಗಳು, ಮಹಾರಾಷ್ಟ್ರದ ಮುಖ್ಯ ಮಂತ್ರಿ ಗಳು ಮತ್ತು ಗಡಿಯಲ್ಲಿರತಕ್ಕ ಅನೇಕ ನಾಯಕರುಗಳು ಮತ್ತು ಅಲ್ಲಿನ ಪ್ರತಿನಿಧಿಗಳು ಹೋಗಿದ್ದರೂ

ಇಲ್ಲಿಯವರೆಗೆ ಕೂಡ ಪ್ರಧಾನಮಂತ್ರಿಗಳೇ ಆಗಲಿ, ಗೃಹ ಮಂತ್ರಿಗಳೇ ಆಗಲಿ ಈ ವಿಚಾರದ ಬಗ್ಗೆ ಯಾವ ರೀತಿಯಲ್ಲೂ ಚಿಚ್ಚಿ ಹೇಳಿಲ್ಲ.

ಇಲ್ಲಿಯವರೆಗೂ ಪ್ರಧಾನ ಮಂತ್ರಿಗಳಾಗಲಿ, ಡೆಲ್ಲಿಯಲ್ಲಿರುವ ಗೃಹ ಮಂತ್ರಿಗಳಾಗಲಿ ಯಾರೇ ಆಗಲಿ ಈ ಪ್ರಶ್ನೆಯನ್ನು ಇತ್ಯರ್ಥಮಾಡಬೇಕು, ನೀವು ಒರಬೇಕು, ನಿಮ್ಮ ವಿಚಾರ ಏನಿದೆ ಎನ್ನುವುದನ್ನು ಸಹ ಕೇಳಿಲಿಲ್ಲ. ಬಹುಶಃ ನಾಯಕರು ಹೋಗಿಬರಬಹುದು, ಮೆಮೊರಾಂಡಮ್ ಕೊಟ್ಟಿರಬಹುದು, ಅವರು ಅದನ್ನು ತೆಗೆದುಕೊಂಡಿರಬಹುದು, ಅನಂತರ ಸುಮ್ಮನೆ ಆಗಿರಬಹುದು. ಇಷ್ಟಕ್ಕೆ ಇದು ಏನೂ ಆಗಲಿಲ್ಲ. ಇಂಥ ಒಂದು ಪರಿಸ್ಥಿತಿ ಇರುವಾಗ ನಾವು ಅದಕ್ಕೆ ಜೀವದಾನ ಮಾಡುವುದು ಬೇಡ. ನಾವು ಅಗತ್ಯವಿರುವಾಗ ನಾವೇ ನಾಯಕರು ಹೋದರೆ ಬಹುಶಃ ಸಕ್ತಿರುವ ಪ್ರಶ್ನೆಗೆ ಮತ್ತೆ ಜೀವಧಾನ ಕೊಟ್ಟಂತಾಗುತ್ತದೆ. ಆದಕ್ಕಾಗಿ ಸ್ಪಷ್ಟವಾದ ನಿಲುವನ್ನು ಕರ್ನಾಟಕದ ಜನತೆ ತಾಳಿದೆ. ಮಹಾಜನ್, ಕಮಿಷನ್ ವರದಿ ಜಾರಿಯಾಗುವುದು ಬಿಟ್ಟರೆ ಬೇರೆ ಗಡಿ ಪ್ರಶ್ನೆಯೇ ಇಲ್ಲವೆಂದು ಅನೇಕ ಬಾರಿ ಹೇಳಿದ್ದೇನೆ.

(ಒಬ್ಬ ಮಾನ್ಯ ಸದಸ್ಯರು ಹಿಂದಿಯಲ್ಲಿ ಮಾತನಾಡಿದರು)

(ಗೊಂದಲ)

ಒಬ್ಬ ಮಾನ್ಯ ಸದಸ್ಯರು.—ಮಾನ್ಯ ಸದಸ್ಯರು ಹಿಂದಿಯಲ್ಲಿ ಪ್ರಶ್ನೆಯನ್ನು ಕೇಳುತ್ತಿದ್ದಾರೆ. ಇದು ಯಾರಿಗೂ ಗೊತ್ತಾಗುವುದಿಲ್ಲ. ಮಾನ್ಯ ಅಧ್ಯಕ್ಷರೇ, ಅವರನ್ನು ಕನ್ನಡದಲ್ಲಿ ಮಾತನಾಡುವಂತೆ ಹೇಳಬೇಕೆಂದು ಕೋರುತ್ತೇನೆ.

ಒಬ್ಬ ಮಾನ್ಯ ಸದಸ್ಯರು.—ಅವರು ಮಾತನಾಡುತ್ತಿರತಕ್ಕಂಥ ಭಾಷೆ ಯಾವುದು ಎನ್ನುವುದು ಗೊತ್ತಾಗಬೇಕು.

ಅಧ್ಯಕ್ಷರು,—ಅವರು ಈಗ ಇಂಗ್ಲೀಷಿನಲ್ಲಿ ಮಾತನಾಡುತ್ತಿದ್ದಾರೆ.

SRI K. C. MODGEKAR (Bagewadi),—Sir, (in Hindi)

MR. SPEAKER.—(in Hindi) outsiders who are coming from Maharashtra are raising that problem. Under Article 3 of the Constitution the central Government has to take initiative in this behalf Karnataka Government has to take initiative to keep the relationship between Maharashtra and Karnataka. Why the Chief Minister and the members of this angnst house are not taking initiative to solve this problem once and for all.

SRI VEERENDRA PATIL.—Sir, I want to make it clear that the question of resolving the problem or finding a solution to the problem arise only when there is a problem. According to Government of India there is absolutely no problem, and no dispute. So far as Belgaum or border areas are concerned. It has been resolved and has been decided finally. The only thing that is left now is implementing the report of the Mahajan Commission, which was appointed by the Govt. of India and my stand is that since Govt. of India appointed the Commission, it is the moral responsibility of the Govt. of India to see that the recommendations of the commission are implemented n toto. We have been taking this stand and it is our consistent stand that there is no dispute whatsoever with regard to any border area with Maharashtra.

ಅಧ್ಯಕ್ಷರು.— ಮಾನ್ಯ ಸದಸ್ಯರಾದ ಬಿ ಹೆಚ್. ಯಂಕಾಸಾಯ್ಯರವರ ಚುಕ್ಕೆ ಪ್ರಶ್ನೆ ೨೧(೩೬)ಕ್ಕೆ ಸರ್ಕಾರದವರು ಕಾಲಾವಕಾಶವನ್ನು ಕೇಳಿದ್ದಾರೆ. ಆದ್ದರಿಂದ ಇದನ್ನು ಇನ್ನೊಂದು ದಿವಸಕ್ಕೆ ಹಾಕುತ್ತೇನೆ.